<u>**2**ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಪಾಂಡವಪುರ</u>

ಸಿ.ಸಿ. ನಂಬ್ರ: **36/2022** ಸಿ.ಡಬ್ಲ್ಯೂ: **1** ಪಿ.ಡಬ್ಲ್ಯೂ: **1**

ದಿನಾಂಕ: 20-06-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಪಾಟಿ ಸವಾಲು ಆರೋಪಿ ಶ್ರೀ ಸಿ ಜೆ ಜಿ ವಕೀಲರವರಿಂದ:</u>-

ದೂರನ್ನು ನಾನೇ ಬರೆದಿರುತ್ತೇನೆ. ನಾನು ಪಿಯುಸಿವರೆಗೂ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ಅಪಘಾತ ಸಮಯದಲ್ಲಿ ನಾನು ಸ್ಥಳದಲ್ಲಿ ಇದ್ದೆ. ನನ್ನ ದೂರಿನಲ್ಲಿ ಸಹಾ ನಾನು ಅಪಘಾತದ ಸಮಯದಲ್ಲಿ ಸ್ಥಳದಲ್ಲಿ ಇದ್ದೆ ಎಂದು ತಿಳಿಸಿರುತ್ತೇನೆ. ಪಾಂಡವಪುರದಿಂದ ಮೈಸೂರಿಗೆ ಹೋಗುವ ರಸ್ತೆಯ ಎಡ ಭಾಗದಲ್ಲಿ ಹಾಗೂ ಮೈಸೂರಿನಿಂದ ಪಾಂಡವಪುರಕ್ಕೆ ಬರುವ ಬಲಭಾಗದಲ್ಲಿ ಕಾಲುವೆ ಬರುತ್ತದೆ ಎಂದರೆ ಸರಿ. ಅಪಘಾತವಾಗಿದೆ ಎನ್ನುವ ಸಮಯದಲ್ಲಿ ರಸ್ತೆಗೆ ಅಡ್ಡಲಾಗಿ ಹಸು ಬಂದಿದ್ದು, ಸದರಿ ಹಸುವನ್ನು ಹಿಡಿದುಕೊಳ್ಳಲು ನನ್ನ ತಂದೆ ರಸ್ತೆಯಲ್ಲಿ ಬರುತ್ತಿರುವ ಕಾರಣ ವಾಹನಗಳನ್ನು ನೋಡದೆ ಏಕಾ ಏಕಿ ಹಸುವನ್ನು ಹಿಡಿದುಕೊಳ್ಳಲು ಹೋಗಿರುತ್ತಾರೆ ಎಂದರೆ ಸರಿಯಲ್ಲ.

2. ನಾನು ಮತ್ತು ನನ್ನ ತಂದೆ ಪಾಂಡವಪುರದಿಂದ ಮೈಸೂರಿಗೆ ಹೋಗುವ ರಸ್ತೆಯ ಕಡೆಗೆ ನಡೆದುಕೊಂಡು ಹೋಗುತ್ತಿದ್ದೇವು. ನಮ್ಮ ಹಿಂದೆಯಿಂದ ವಾಹನ ಬಂದಿದೆ ಎಂದು ನಾನೇ ದೂರಿನಲ್ಲಿ ಬರೆದಿರುತ್ತೇನೆ. ನಮಗೆ ಅಪಘಾತ ಮಾಡಿರುವ ಲಾರಿಯು ಕಬ್ಬು ತುಂಬಿರುವ ಲಾರಿಯಾಗಿರುತ್ತದೆ. ನಾವು ಬರುತ್ತಿರುವ ರಸ್ತೆ ಏರು ಮುಖ ರಸ್ತೆಯಾಗಿರುತ್ತದೆ ಎಂದರೆ ಸರಿ. ಚಾಸಾ-3 ಮತ್ತು 4 ರವರು ಅಪಘಾತ ಸಮಯದಲ್ಲಿ ಎಲ್ಲಿದ್ದರು ಎಂದರೆ ಸಾಕ್ಷಿಯು ಅಕ್ಕಪಕ್ಕದಲ್ಲಿ ಓಡಾಡುತ್ತಿದ್ದರು. ನನ್ನ ತಂದೆಯವರನ್ನು ಆಟೋ ಒಂದರಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.

3. ಅಪಘಾತ ಪಡಿಸಿದ ಲಾರಿ ನಂಬರ ಕೆಎ-11 ಬಿ-9886 ಆಗಿರುತ್ತದೆ. ಲಾರಿ ಎಷ್ಟು ವೇಗದಲ್ಲಿ ಬಂದಿರುತ್ತದೆ ಎಂದರೆ ಸಾಕ್ಷಿಯ ತುಂಬಾ ವೇಗದಲ್ಲಿ ಬಂದಿರುತ್ತದೆ ಎಂದು

ನುಡಿದರು. ಕಬ್ಬು ತುಂಬಿರುವ ಲಾರಿಯಾಗಿರುವ ಕಾರಣ ಹಾಗೂ ರಸ್ತೆ ಏರು ಮುಖ ರಸ್ತೆಯಾಗಿದ್ದರಿಂದ ಲಾರಿ ಅತಿ ವೇಗವಾಗಿ ಬರಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಲಾರಿಯನ್ನು ಆರೋಪಿ ಚಾಲಕನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಪಘಾತದ ಪರಿಹಾರಕ್ಕಾಗಿ ಪ್ರಕರಣವನ್ನು ದಾಖಲಿಸಿರುತ್ತೇವೆ. ಲಾರಿಯ ಚಾಲಕನ ತಪ್ಪಿಂದ ಅಪಘಾತವಾಗಿರುವುದಿಲ್ಲ, ಹಸುವನ್ನು ಹಿಡಿದುಕೊಳ್ಳಲು ನನ್ನ ತಂದೆ ರಸ್ತೆಯಲ್ಲಿ ಏಕಾಏಕಿ ಬಂದು ನನ್ನ ತಂದೆಯ ತಪ್ಪಿನಿಂದ ಈ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಪರಿಹಾರ ಪಡೆಯುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಬ್ಬು ತುಂಬಿರುವ ಲಾರಿ ನಿಧಾನವಾಗಿ ಬರುತ್ತಿದ್ದು, ನನ್ನ ತಂದೆಯ ನಿರ್ಲಕ್ಷತನದಿಂದ ಈ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ನ್ಯಾಯಾಲಯ, ಪಾಂಡವಪುರ